


ISSN 2347-3452

MANIPAL ACADEMY of HIGHER EDUCATION

# ತುಳುವ

ತ್ರೈಮಾಸಿಕ

ಜನವರಿ-ಮಾರ್ಚ್ 2022
ಸಂಪುಟ : 12, ಸಂಚಿಕೆ : 1



ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ

ಎಂ.ಜಿ.ಎಂ. ಕಾಲೇಜು ಆವರಣ, ಉಡುಪಿ - 576102



Principal
Dr. B.B. Hegde First Grade College
Kundapura-576201

# ತುಳುವ-85

ಭಾಷೆ, ನಾಡು, ಸಂಸ್ಕೃತಿಗೆ ಸಂಬಂಧಿಸಿದ
ತ್ರೈಮಾಸಿಕ

ISSN 2347-3452

**ಸಂಪುಟ - 12 ಸಂಚಿಕೆ - 1**

**ಜನವರಿ-ಮಾರ್ಚ್, 2022**

ಪ್ರಧಾನ ಸಂಪಾದಕ
**ಡಾ. ಬಿ. ಜಗದೀಶ್ ಶೆಟ್ಟಿ**



ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ
ಉಡುಪಿ - 576 102, ಕರ್ನಾಟಕ
ದೂರವಾಣಿ : 0820 - 2521159
email- rgpaiudupi@gmail.com



**ಸಂಪಾದಕ ಮಂಡಳಿ**

ಡಾ. ಎನ್. ತಿರುಮಲೇಶ್ವರ ಭಟ್ಟ
ಪ್ರೊ. ಮುರಲೀಧರ ಉಪಾಧ್ಯ, ಹಿರಿಯಡಕ
ಡಾ. ಪಾದೇಕಲ್ಲು ವಿಷ್ಣು ಭಟ್ಟ
ಡಾ. ಅರುಣಕುಮಾರ್ ಎಸ್. ಆರ್.
ಪ್ರೊ. ಗುರುಮೂರ್ತಿ ಕೆ. ಕೆ.



TULUVA–Quarterly, Edited and Published by Dr. B. Jagadeesh Shetty for Rashtrakavi Govind Pai Samshodhana Kendra, MGM College Campus, Udupi - 576102, Karnataka and Printed by M/s Prakash Offset Printers, Baikampady, Mangalore

1 ವರ್ಷಕ್ಕೆ : ರೂ. 200/-
5 ವರ್ಷಕ್ಕೆ : ರೂ. 800/-
10 ವರ್ಷಕ್ಕೆ : ರೂ. 1500/-
ಆಜೀವ ಸದಸ್ಯತನ : ರೂ. 2000/-

**Bank Details for Online transaction**
**Rastrakavi Govind Pai Samshodhana Kendra**
Bank : Canara Bank, Kunjibettu Branch
A/c Number : 01862200001473
MICR CODE : 576015052
IFSC CODE : CNRB0010186


# ಒಳಪುಟಗಳಲ್ಲಿ...


**ಭಾರತೀಯ ಸಂಗೀತದ ಶಾಸನಗಳು, ಶಾಸನೋಕ್ತ ಶಾಸ್ತ್ರಕಾರರು ಮತ್ತು ಇತರ ವಿವರಗಳು : ಸಂಕ್ಷಿಪ್ತ ಪಕ್ಷಿನೋಟ** - ಎಸ್. ಕಾರ್ತಿಕ್ / 3

**ಸಿದ್ಧಲಿಂಗಯ್ಯನವರ ಕವನಗಳು ಚಿಂತನಶೀಲ ಧ್ವನಿಗಳು** - ಡಾ. ರಾಜಶೇಖರ ಜಮದಂಡಿ/ 13

**ಶೇಕ್‌ಸ್ಪಿಯರ್ ಮನೆಗೆ ಬಂದ: ನಾಟಕದ ವಿಶ್ಲೇಷಣೆ** - ಡಾ. ಮಹಾಂತೇಶ ಪಾಟೀಲ/18

**ಕುಂದಕರಾವಳಿಯ ವಿಶಿಷ್ಟ ಆರಾಧನಾ ಕಲೆ: ಹೌಂದ್ರಾಯನ ವಾಲ್ಗ** - ಚೇತನ್ ಶೆಟ್ಟಿ /22

**ತುಳು ಶಬ್ದ ವಿಚಾರ- ಬಲಾಯಿ** - ಡಾ. ಪಾದೇಕಲ್ಲು ವಿಷ್ಣು ಭಟ್ಟ/27

**ದೈವಾರಾಧನೆಯಲ್ಲಿನ 16 ಕಟ್ಟಳೆಗಳು** - ಶ್ರೀಮತಿ ರತ್ನಮಾಲಾ/30

**ಆಟಿದ ಪುನ್ನಮೆ 'ತಡ್ಯ ಪುಡಾಡುನು'** - ಕೆ. ಎಲ್. ಕುಂಡಂತಾಯ/37

**ಹೋಮಂಚಜ್ಜ(ಯ)ದ ಕಟ್ಟಳೆ** - ಡಾ. ಎ. ಶ್ರೀಧರ/39

**ಜಾಗತೀಕರಣ ಮತ್ತು ಯಕ್ಷಗಾನ** - ಪ್ರಫುಲ್ಲ ಕೆ. ವಿ./43

**Inland Trade of South Kanara Under the Colonial Rule (1800-1860)** -Dr. Malathi K. Moorthy/51

**ಅನುವಾದವೆಂಬೆನೆ ಅನುವಾದವ!?** - ಡಾ. ಮಹಾಬಲೇಶ್ವರ ರಾವ್/58

**ವರದಿಗಳು :**
- ಪೊಳಲಿ ಶೀನಪ್ಪ ಹೆಗ್ಡೆ - ಎಸ್. ಆರ್. ಹೆಗ್ಡೆ ಪ್ರಶಸ್ತಿ ಪ್ರದಾನ;
- ಬಾರ್ಕೂರು-ಮೂಡುಕೇರಿ ಗಂಗಮ್ಮ ರಾಮಚಂದ್ರ ಶಾಸ್ತ್ರಿ ಸ್ಮರಣಾರ್ಥ ಚಿತ್ರಕಲಾ ಸ್ಪರ್ಧೆ;
- ಮುಳಿಯ ತಿಮ್ಮಪ್ಪಯ್ಯ ಪ್ರಶಸ್ತಿ ಪ್ರದಾನ;
- ವಿಸ್ತರಣಾ ಉಪನ್ಯಾಸ ೫;
- ಎನ್.ಎಸ್.ಡಿ. ವಿದ್ಯಾರ್ಥಿಗಳಿಗೆ ಯಕ್ಷಗಾನ ತರಬೇತಿ ಶಿಬಿರ





Principal
Dr. B.B. Hegde First Grade College
Kundapura -576201

# ಕುಂದಕರಾವಳಿಯ ವಿಶಿಷ್ಟ ಆರಾಧನಾ ಕಲೆ: ಹೌಂದ್ರಾಯನ ವಾಲ್ಗ

– ಚೇತನ್ ಶೆಟ್ಟಿ

ಪ್ರಕೃತಿಯಲ್ಲಿ ದೇವರ ಇರುವಿಕೆಯನ್ನು ಕಂಡವರು ಜನಪದರು. ನಮ್ಮ ಸುತ್ತಮುತ್ತ ನಾವು ದೇವತಾರಾಧನೆ, ನಾಗಾರಾಧನೆ, ಭೂತಾರಾಧನೆ, ಯಕ್ಷಾರಾಧನೆ, ವೃಕ್ಷಾರಾಧನೆ, ಪ್ರಕೃತಿ ಆರಾಧನೆ ಮುಂತಾದ ವಿಶಿಷ್ಟ ಆರಾಧನೆಗಳನ್ನು ಕಾಣಬಹುದಾಗಿದೆ. ಇದಕ್ಕೆಲ್ಲಾ ನಮ್ಮ ಪೂರ್ವಿಕರು ಉತ್ತಮವಾದುದರಲ್ಲಿ ದೈವತ್ವವನ್ನು ಕಂಡದ್ದೇ ಮೂಲಕಾರಣ. ತಮ್ಮ ಬದುಕಿನಲ್ಲಿ ಉತ್ತಮವಾದುದಕ್ಕೆ ದೈವತ್ವದ ಪದವಿ ನೀಡಿದ ನಮ್ಮ ಪೂರ್ವಿಕರು ಪ್ರಕೃತಿಗೆ ಕೃತಜ್ಞತೆಯನ್ನು ಸಲ್ಲಿಸಿದರು. ಇದರ ಜೊತೆಗೆ ಪ್ರತಿಫಲ ಪಡೆಯುವ ಮೂಲಕವಾಗಿ ಲೋಕ ಕಲ್ಯಾಣವನ್ನು ಆಶಿಸಿದರು. ಹೀಗೆ ನಮ್ಮ ಪೂರ್ವಿಕರಿಂದ ಮೊದಲುಗೊಂಡು ಇಂದಿಗೂ ನಮ್ಮ ಜನರ ಧಾರ್ಮಿಕ ಸಾಂಸ್ಕೃತಿಕ ಜೀವನದಲ್ಲಿ ಮಹತ್ವ ಪಡೆದಿರುವ ಆರಾಧನೆಗಳಲ್ಲಿ ತುಳಸಿ ಆರಾಧನೆಯೂ ಕೂಡ ಒಂದಾಗಿದೆ.

ತುಳಸಿ ಆರಾಧನೆಯು ತನ್ನದೇ ಆದ ನಿರ್ದಿಷ್ಟ ಉದ್ದೇಶಗಳನ್ನು ಹೊಂದಿದೆ. ಜನ ತಮ್ಮ ಸಂಕಟ ಕಾಲದಲ್ಲಿ ಹೇಳಿಕೊಂಡ ಹರಕೆಯ ಪ್ರಯುಕ್ತವೂ ತುಳಸಿಗೆ ಹಲವು ವಿಧದ ಪೂಜೆಯನ್ನು ಮಾಡುತ್ತಾರೆ. ಮನೆಯ ಗೃಹಪ್ರವೇಶದ ದಿನ ಹಾಗೂ ಹೊಸ ತುಳಸಿಕಟ್ಟೆಯನ್ನು ಕಟ್ಟಿದಾಗ ತುಳಸಿಗೆ ಕಟ್ಟೆ ವಸಂತವನ್ನು ಮಾಡುತ್ತಾರೆ. ಸಾಮಾನ್ಯವಾಗಿ ತಿರುಪತಿ, ಕಾಶಿ, ಅಯ್ಯಪ್ಪ ಸ್ವಾಮಿ ಕ್ಷೇತ್ರಕ್ಕೆ ಹೋಗುವ ಯಾತ್ರಿಕರು ಹೊರಡುವ ಮೊದಲು ಸಾಂಕೇತಿಕವಾಗಿ ವಸಂತವನ್ನು ನೆರವೇರಿಸುತ್ತಾರೆ. ಯಾತ್ರೆಗೆ ಹೋಗಿ ಬಂದ ನಂತರವೂ ವಸಂತವನ್ನು ಮಾಡುತ್ತಾರೆ. ಗೃಹ ಪ್ರವೇಶವಾದ ಮರು ವರುಷ ಅದೇ ದಿನಾಂಕದಂದು ವಸಂತವನ್ನು ಮಾಡುವ ಕ್ರಮ ಇದೆ. ತುಳಸಿ ಪೂಜೆಯನ್ನು ಕೆಲವರು ದೀಪಾವಳಿ ಹಬ್ಬದ ದಿನ, ಕೆಲವರು ದ್ವಾದಶಿ ದಿನ ಮಾಡುತ್ತಾರೆ. ಈ ತುಳಸಿ ಪೂಜೆ ಮತ್ತು ವಸಂತ ಪೂಜೆಯ ಭಾಗವಾಗಿ ಕುಂದಕರಾವಳಿಯ ಪರಿಸರದಲ್ಲಿ ಕಂಡು ಬರುವ ವಿಶಿಷ್ಟ ಆರಾಧನಾತ್ಮಕ ಕಲೆ 'ಹೌಂದ್ರಾಯ ವಾಲ್ಗ'.

ಕನ್ನಡ ಕರಾವಳಿಯ ಕುಂದಗನ್ನಡ ಪರಿಸರದಲ್ಲಿ ಈ ಆರಾಧನಾ ಕಲೆ ವಿಶಿಷ್ಟವಾಗಿ ಕಂಡುಬರುತ್ತದೆ. ಕುಂದನಾಡಿನಲ್ಲಿ ಈ ಆಚರಣೆಗೆ ತುಳಸಿ ಪೂಜೆ, ಹೌಂದ್ರಾಯನ ವಾಲ್ಗ, ತುಳಸಿ ಪೂಜೆಯ ಕೋಣಿಕೆ (ಕುಣಿತ), ಸಾವಿರ ಹಣ್ಣಿನ ವಸಂತಪೂಜೆ ಎಂಬಿತ್ಯಾದಿ ಹೆಸರುಗಳಿವೆ. ಕುಂದನಾಡಿನಲ್ಲಿ ತುಳಸಿ ವಸಂತ ಪೂಜೆಯ ಈ ಕುಣಿತವನ್ನು ನಡೆಸಿಕೊಡುವವರು ಬಿಲ್ಲವರು ಮತ್ತು ಮೊಗವೀರರು. ಕುಂಬಾರರ ಕುಣಿತದ ತಂಡಗಳು ಇದ್ದವು ಎಂಬ ಪ್ರತೀತಿ ಇದೆ. ಈ ಮೂರು ಸಮುದಾಯದವರು ಹರಕೆ ಹೊತ್ತು ವಿಶೇಷವಾಗಿ ಆಚರಿಸುತ್ತಾರೆ. ಅಪರೂಪಕ್ಕೆ ಬೇರೆ ಜಾತಿ ಸಮುದಾಯದವರು ಹರಕೆ ಹೊತ್ತು ಇವರನ್ನು ಕರೆಯಿಸಿ ಆಚರಿಸುವುದುಂಟು. ಕೆಲವೇ ದಶಕಗಳ ಹೌಂದ್ರಾಯನ ವಾಲ್ಗದ ಕುಣಿತವನ್ನು ನಡೆಸಿಕೊಡುವ ಹತ್ತಾರು ಮೇಳಗಳಿದ್ದವು ಎಂದು ಚರಿತ್ರೆ ಹೇಳುತ್ತದೆ. ಆದರೆ ವರ್ತಮಾನದಲ್ಲಿ ಬಿಲ್ಲವರ ಒಂದು ತಂಡ, ಮೊಗವೀರರ ಒಂದು ತಂಡವಿದೆ.

**ಹೌಂದ್ರಾಯನ ಪದ ನಿಷ್ಪತ್ತಿ:**

ಹೌಂದ್ರಾಯನ ವಾಲ್ಗದ ಪದ ನಿಷ್ಪತ್ತಿ ಸಂಕೀರ್ಣವಾಗಿದೆ. ಈ ವಿಷಯದ ಕುರಿತು ಡಾ। ಶಿವರಾಮ ಕಾರಂತರು, ಡಾ. ಗುಂಡ್ಮಿ ಚಂದ್ರಶೇಖರ್ ಐತಾಳರು. ಟಿ. ಕೇಶವ ಭಟ್ಟರು, ಪ್ರೊ. ಎ. ವಿ. ನಾವಡರು, ಕೂರಾಡಿ ಸದಾಶಿವ ಕಲ್ಕೂರರು, ಡಾ. ಪಾ. ನ. ಮಯ್ಯ, ದೇವು ಹನೆಹಳ್ಳಿ



Principal
Dr. B.B. Hegde First Grade College
Kundapura -576201

ಮುಂತಾದವರು [illegible]ಸಿದ್ದಾರೆ. ಡಾ। ಕಾರಂತರು 1968ರಲ್ಲಿ [illegible] ಜನಪದ ವಸ್ತುವೊಂದು ಕಾಲಕ್ರಮೇಣ [illegible] ಹೌಂದ್ರಾಯನ ವಾಲ್ಗದ ಕುರಿತು ಪ್ರಸ್ತಾಪಿಸಿದ್ದಾರೆ. ಜನಪದ ವಸ್ತುವೊಂದು ಕಾಲಕ್ರಮೇಣ ಮಾರ್ಪಾಟಾಗುವ ಸಂದರ್ಭದ ನಿದರ್ಶನಕ್ಕಾಗಿ ಹೌಂದ್ರಾಯನ ವಾಲ್ಗವನ್ನು ಉಲ್ಲೇಖಿಸುತ್ತಾರೆ. ದೇವಸ್ಥಾನದ ಜಾತ್ರೆಯ ಓಕುಳಿ ಹೊಂಡ, ಬೇಟೆಯ ಸಂದರ್ಭ ಮತ್ತು ತುಳಸೀ ಪೂಜೆಯ ಸಂದರ್ಭಗಳಲ್ಲೂ ಬಳಕೆಯಾಗುವ ವರುಣ ಪೂಜೆಗೆ ಸಂಬಂಧಿಸಿದ ಹಾಡು ಇನ್ನೊಂದೇ ಆಯಿತು ಎನ್ನುತ್ತಾರೆ. ಸಮುದ್ರ–ಸೌಂದ್ರ–ಹೌಂದ್ರ ಆಗಿ ಹೌಂದ್ರಾಯನ ರೂಪ ಪ್ರಾಪ್ತವಾಗಿ ಕಡಲ ಕರಾವಳಿಯ ಪುರಾತನ ನಿವಾಸಿಗಳು ನಡೆಯಿಸುತ್ತಿದ್ದ ಸಮುದ್ರರಾಯ ಇಲ್ಲವೆ, ವರುಣ ಪೂಜೆಯ ರೂಪಾಂತರ ಎಂಬ ಅಭಿಪ್ರಾಯಕ್ಕೆ ಕಾರಂತರು ಬರುತ್ತಾರೆ.

ಗುಂಡ್ಮಿ ಚಂದ್ರಶೇಖರ್ ಐತಾಳ್ ಅವರು ಕಾರಂತರ ವಾದವನ್ನು ಒಪ್ಪಿಕೊಂಡು ಹೌಂದ್ರಾಯನ ವಾಲ್ಗದ ಎಂಟು ಸಂಧಿಗಳ ಪಾಠಗಳನ್ನು 'ಕೈಲಿಯ ಕರೆದ ನೊರೆಹಾಲು' ಎಂಬ ಪುಸ್ತಕದಲ್ಲಿ 'ಅನುಷ್ಠಾನಗಳು' ಎಂಬ ಮುಖ್ಯ ಶೀರ್ಷಿಕೆಯಡಿಯಲ್ಲಿ 'ತೊಳಸಿ ಪೂಜೆಯ ಪದ' ಎಂಬ ಶೀರ್ಷಿಕೆಯಲ್ಲಿ ನೀಡಿದ್ದಾರೆ. "ಕಾರ್ತಿಕ ಮಾಸದಲ್ಲಿ ಪೈರೆಲ್ಲ ಮನೆಗೆ ತುಂಬಿ ರೈತನ ಮನಸ್ಸು ತುಂಬಿದ್ದಾಗ, ವರ್ಷಕ್ಕೊಮ್ಮೆ ತನ್ನ ಹರ್ಷಕ್ಕೆ ಕಾರಣವಾದ, ಬೆಳೆಯನ್ನು ಕರುಣಿಸಿದ ಮಳೆರಾಯನಾದ ವರುಣನನ್ನು ಪೂಜಿಸುವುದು ದಕ್ಷಿಣ ಕನ್ನಡ ಜಿಲ್ಲೆಯ ರೈತರ ಸಂಪ್ರದಾಯ, ಮೇಲು ವರ್ಗದ ಜನರು ಉತ್ಥಾನ ದ್ವಾದಶಿಯಂದು ವಿಷ್ಣುವಿನ ಪ್ರಿಯೆ ತುಲಸಿಯನ್ನು ಮಂತ್ರ ತಂತ್ರ ಪೂರ್ವಕವಾಗಿ ಪೂಜಿಸಿದರೆ, ಕೆಳವರ್ಗದ ರೈತರು ತಮ್ಮದೇ ಆದ ಜನಪದ ರೀತಿಯಲ್ಲಿ 'ತೊಳಸಿ ಪೂಜೆ' ಮಾಡುವರು" (1970:1). ಗುಂಡ್ಮಿಯವರು ಈ ಜನಪದ ಆರಾಧನ ಕ್ರಮ ಹಳ್ಳಿಯವರಿಗೆ ಅತ್ಯಂತ ವಿಶಿಷ್ಟವಾದುದು ಎಂದಿದ್ದಾರೆ. ಸಮುದ್ರ, ನದಿ, ಅಷ್ಟ ದಿಕ್ಕುಗಳು, ಹತ್ತು ಅವತಾರಗಳು, ಋಷಿಗಳು, ದೇವತೆಗಳು ಇಲ್ಲಿ ಒಕ್ಕಲ ಮಕ್ಕಳ ಕೃತಜ್ಞತೆಗೆ ಪಾತ್ರರು ಎನ್ನುವುದನ್ನು ತಿಳಿಸಿದ್ದಾರೆ.

ಟಿ. ಕೇಶವ ಭಟ್ಟರು ತಮ್ಮ ಹಾಡಿನ ಚೂಡಾಮಣಿಯಲ್ಲಿ ಓಲಗ ಸಂಧಿಯ ಪಾಠವೊಂದನ್ನು ಕೊಟ್ಟು ಓಲಗ ಅಂದರೆ ಸೇವೆ ಎಂದರ್ಥ, ಧನುರ್ಮಾಸದಲ್ಲಿ ಬ್ರಾಹ್ಮಣೇತರರು ಮಾಡುವ ತುಲಸೀ ಪೂಜೆಯ ಹಬ್ಬ ಎಂದು ಕರೆದಿದ್ದಾರೆ. (1971:81) ಪ್ರೊ. ಎ. ವಿ. ನಾವಡರು ಕಾರಂತರು ಮತ್ತು ಗುಂಡ್ಮಿಯವರ ವರುಣ ಪೂಜೆಯ ಹಾಡನ್ನು ನಿರಾಕರಿಸುತ್ತಾ ಮಳೆರಾಜನಿಗೂ ಈ ಆಚರಣೆಗೂ ಯಾವುದೇ ಸಂಬಂಧವಿಲ್ಲ. ವಾಸ್ತವಾಂಶ ದಕ್ಷಿಣ ಕನ್ನಡದುದ್ದಕ್ಕೂ ಪ್ರಚಲಿತವಿರುವ ತಿರುಪತಿ ತಿಮ್ಮಪ್ಪನ ಆರಾಧನೆ ಇದಾಗಿದ್ದು, ಗೋವಿಂದೇರಾಯನ ವಾಲಗವೇ ಕ್ರಮೇಣ ಹೌಂದೇರಾಯನ ವಾಲ್ಗವಾಗಿ ಬಳಕೆಗೆ ಬಂದಿರಬೇಕೆಂದು ಹಾಡು ಪ್ರಕಟಿಸಿದ ಆಂತರಿಕ ಅಂಶಗಳ ಮೂಲಕ ಹೇಳುತ್ತಾರೆ. "ಹೌಂದೇರಾಯನ ವಾಲ್ಗವೆ – ಒಂದು ವಿಶ್ಲೇಷಣೆ" ಎಂಬ ಲೇಖನದಲ್ಲಿ ಕೂರಾಡಿ ಸದಾಶಿವ ಕಲ್ಕೂರರು ಎ. ವಿ. ನಾವಡರ ಅಭಿಪ್ರಾಯವನ್ನು ಒಪ್ಪಿಕೊಂಡಿದ್ದಾರೆ. ಹೌಂದೇರಾಯ– ಸಮುದ್ರರಾಯನಲ್ಲ, ಬದಲಾಗಿ ಗೋವಿಂದೇರಾಯ ಎಂದು ಕಾರಂತರ ವರುಣ ಪೂಜೆಯ ವ್ಯಾಖ್ಯೆಯನ್ನು ತಿರಸ್ಕರಿಸಿದ್ದಾರೆ. "ಓಹೋ! ಓಹೋ! ಓಲಗವೇ! ಗೋವಿಂದರಾಯನ ಓಲಗವೇ! ಅಪಭ್ರಂಶವಾಗಿ ಗ್ರಾಮ್ಯ ಭಾಷೆಯಲ್ಲಿ ಹೋ ಹೋ ವಾಲ್ಗುವೇ ಹೌಂದೇರಾಯನ ವಾಲ್ಗುವೇ" ಎಂಬ ಪಲ್ಲವಿ ರೂಪ ಪಡೆಯಿತು ಎನ್ನುತ್ತಾರೆ. ಇದು ವಿದ್ವಾಂಸರಲ್ಲಿ ತಪ್ಪು ಅಭಿಪ್ರಾಯಕ್ಕೆ ಎಡೆಮಾಡಿಕೊಟ್ಟಿತು. ಮೂಲತಃ ಇದು ತಿರುಪತಿ ತಿಮ್ಮಪ್ಪನನ್ನು ಕುರಿತು ಗೋವಿಂದ ಎನ್ನಿ ಗೋವಿಂದ ಎಂಬ ಸಮೂಹ ಘೋಷಣೆಯ ಭಾಗವಾಗಿದೆ ಎನ್ನುತ್ತಾರೆ.

ಕೋಟ ಮತ್ತು ಕುಂದಾಪುರ ಪರಿಸರದ ಬಿಲ್ಲವರು ತಿರುಪತಿ ತಿಮ್ಮಪ್ಪನ ಭಕ್ತರು. ಈ ಹೌಂದ್ರಾಯನ ವಾಲ್ಗವು ಹೆಚ್ಚಾಗಿ ಬಿಲ್ಲವರಲ್ಲಿ ಬಳಕೆಯಲ್ಲಿದೆ. ಅನಂತರ ಮೊಗವೀರರಲ್ಲಿ ಹಲವು ಕುಣಿತದ ತಂಡಗಳಿವೆ. ಆದ್ದರಿಂದ ಕಲ್ಕೂರರು ಹೇಳಿದ ಗೋವಿಂದರಾಯನೇ ಹೌಂದೇರಾಯನಾಗಿ ಕ್ರಮೇಣ ಹೌಂದ್ರಾಯ ಎಂಬ ರೂಪ ಪ್ರಾಪ್ತವಾಯಿತು ಎಂಬ ಮಾತು ಹೌಂದ್ರಾಯನ ಪಠ್ಯ ಮತ್ತು ಕ್ರಿಯೆಯ ಸಾಂದರ್ಭಿಕ ಹಿನ್ನಲೆಯಲ್ಲಿ ಸರಿಯಾದ ಗ್ರಹಿಕೆ ಎನ್ನಬಹುದು. ಸಮುದ್ರ ಅಥವಾ ಜಲ